## ಕಾವ್ಯಸಂಕ

poem
I will tell you I love you"

◆ **ನೀವು ಬೆಚ್ಚಿ ಬೀಳುವಂತೆ ಮಾಡುವ ಮತ್ತೆ ಖುಷಿ ಕೊಡುವ ಒಂದು ಖಾಸಗಿ ಸಂಗತಿ ಯಾವುದು?**


ಮನುಷ್ಯರಾಗಿ ನಾವೆಲ್ಲರೂ ಅತಿ ಹೆಚ್ಚು ಭಯ ಪಡುವುದು ಅನಾಮಿಕತೆಗೆ, ಅಪರಿಚಿತತೆಗೆ... ಹೆಣ್ಣಿನ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಇದು ಎಷ್ಟು ಮುಖ್ಯ ವಿಚಾರ ಎಂಬುದು ನಿಮಗೆ ಬಿಡಿಸಿ ಹೇಳಬೇಕಾಗಿಲ್ಲ. ಈ Identity crises ಕೇವಲ ವೈಯಕ್ತಿಕವಾದುದಲ್ಲ. ಎಲ್ಲಾ ರೀತಿಯಿಂದಲೂ ಬಿಕ್ಕಟ್ಟು ಎದುರಿಸುತ್ತಿರುವ ನಮ್ಮಂತಹ ಯುದ್ಧಪೀಡಿತ ದೇಶಗಳಲ್ಲಿ ಇದು ಸಾಮುದಾಯಿಕ ಹೊಣೆಗಾರಿಕೆಯ ಭಾವವಾಗಿಯೂ ಬಲಿಯಬಹುದು.

ನೆಮ್ಮದಿ, ಭದ್ರತೆ, ಕುಟುಂಬದ ಒಳಿತು ಇಂತಹ ಸಣ್ಣ ಪುಟ್ಟ ದೈನಂದಿನ ವಿಚಾರಗಳು ಸೇರಿದಂತೆ ನನಗೆಲ್ಲವು ಖುಷಿ ಕೊಡುತ್ತವೆ. ಆದರೆ ಇಲ್ಲಿರುವ ಸಂದಿಗ್ಧವೇನೆಂದರೆ, ಎಲ್ಲರ ಹಾಗೆ ನಾವೂ ಆರಾಮಾಗಿ ಐಸ್ಕ್ರೀಮ್ ಮೆಲ್ಲುತ್ತಾ ಕೂರಬೇಕೋ? ಅಥವಾ ಪ್ರತಿದಿನ ಮುಂಜಾನೆ ಎದ್ದು ಮಕ್ಕಳ ಹೊಸ ಗೋರಿಗಳಿಗೆ ಹೂ ಸಂಗ್ರಹಿಸಿಕೊಂಡು ಬರಬೇಕೋ? ಹೌದು! ಇವು ಪ್ರಪಂಚದ ಪಾಪದ ಹೂಗಳು! ಪ್ರತಿದಿನ ಹಾಲುಗಲ್ಲದ ಗೋರಿಗಳನ್ನು ಸಿಂಗರಿಸಲು ಹಾತೊರೆಯುತ್ತವೆ!

◆ **ನಿಮ್ಮ ಬರವಣಿಗೆಯ ವೃತ್ತಿ ಜೀವನದಲ್ಲಿ ನೀವು ಹಂಚಿಕೊಳ್ಳಲು ಬಯಸುವಂತಹ ಅಡೆತಡೆಗಳನ್ನೇನಾದರು ಎದುರಿಸಿದ್ದೀರಾ?**

ಖಂಡಿತಾ. ನಾನು ಸಾಕಷ್ಟು ಅಡ್ಡಿ– ಆತಂಕಗಳನ್ನು ಎದುರಿಸಿದ್ದೇನೆ. ಲೇಖಕರಾಗಿ ನಾವು ಹೊಸ ಭೂಖಂಡಗಳನ್ನು ತಲುಪಲು, ಯಶಸ್ಸು ಮತ್ತು ಕೀರ್ತಿ ಸಂಪಾದಿಸಲು ಮತ್ತು ನಮ್ಮ ಸಂದೇಶಗಳನ್ನು ಹರಡಲು ಶ್ರಮಿಸುತ್ತೇವೆ. ಒಬ್ಬರು ಕಲ್ಪಿಸುವಷ್ಟು ಸುಲಭದ ಕೆಲಸ ಇದಲ್ಲ. ನಮಗೆ ನಮ್ಮದೇ ಆದ ನಿರ್ಬಂಧಗಳಿವೆ. ಸಾಮಾಜಿಕ ಜಾಲತಾಣ ಇವುಗಳನ್ನ ಮೀರಲು ಸ್ವಲ್ಪಮಟ್ಟಿಗೆ ದಾರಿ ಒದಗಿಸಿದೆಯಾದರೂ ಇಲ್ಲೂ ಹಲವು ಅಡೆ–ತಡೆಗಳು ಇವೆ. ●

## ಅಫ್ಗಾನ್ ಜೊಲಾನಿ ಕವಿತೆಗಳು



### ರಾಫಾ

ಎಲ್ಲೆಂದರಲ್ಲಿ, ನಮ್ಮಲ್ಲಿ
ವಿಶಾಲವಾಗಿ ಬೆಳೆಯುತ್ತಿವೆ ಈಗೀಗ
ಪುಟ್ಟ ಮಕ್ಕಳು ಆಟವಾಡುವ
ಹೋಂ ವರ್ಕ್ ಮಾಡುವ, ಓದುವ, ಬರೆಯುವ
ನೆಮ್ಮದಿಯ ತಾಣಗಳು
ರಾಫಾ*
ಸಮಾಧಿಗಳು

*ಗಾಜ್ಞಾ ಪಟ್ಟಿ ಮತ್ತು ಈಜಿಪ್ಟಿನ ಗಡಿ ಪಟ್ಟಣ ರಾಫಾ. 26 ಮೇ 2024ರಂದು, ಇಸ್ರೇಲಿ ವಾಯುಪಡೆಯು ರಾಫಾದ ನಿರಾಶ್ರಿತರ ಶಿಬಿರದ ಮೇಲೆ ಬಾಂಬ್ ದಾಳಿ ಮಾಡಿತು. ಮಕ್ಕಳು ಮತ್ತು ಮಹಿಳೆಯರು ಸೇರಿದಂತೆ ದಾಳಿಯಲ್ಲಿ 45ರಿಂದ 70 ಜನ ಪ್ಯಾಲೆಸ್ತೀನಿಯರು ಸಾವನ್ನಪ್ಪಿ, 200ಕ್ಕೂ ಹೆಚ್ಚು ಜನರು ಗಾಯಗೊಂಡರು. ಇಲ್ಲಿ ಶವದ ಬಟ್ಟೆ ಹೊದೆಸಿ ಮಕ್ಕಳ ಕಳೇಬರಗಳನ್ನು ಸಾಲಾಗಿ ಜೋಡಿಸಿಟ್ಟ ದೃಶ್ಯ ಜಗತ್ತಿನ ಗಮನ ಸೆಳೆಯಿತು.